## ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 143/15-16

ದಿನಾಂಕ : ೩೬- 10 - 2016.

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | ಪ್ರತಿವಾದಿಯವರು |
|---|---|
| ಭವಾನಿ ಶಂಕರ | ತಹಶೀಲ್ದಾರರು, |
| ಬಿನ್ ಕೆ. ಈಶ್ವರ | ಪುತ್ತೂರು ತಾಲೂಕು, ಪುತ್ತೂರು |
| ಮರೀಲು ಮನೆ, ಕೆಮ್ಮಿಂಜೆ ಗ್ರಾಮ | |
| ಪುತ್ತೂರು ತಾಲೂಕು, ದ.ಕ. | |
| (ನ್ಯಾಯವಾದಿ: ಶ್ರೀ ಸಿ ಎಚ್ ಜಯರಾಮ) | |

*******

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಸಲ್ಲಿಸಿರುವುದಾಗಿದೆ. ಪುತ್ತೂರು ತಾಲೂಕು ಕೆಮ್ಮಿಂಜೆ ಗ್ರಾಮದ ಸ.ನಂ: 58/2 ಪೈಕಿ ಬಾಗಾಯ್ತು 0.02 ಎಕ್ರೆ, ಸ.ನಂ: 60/1ಬಿ ಪೈಕಿ ತರಿ 0.12 ಎಕ್ರೆ, ಸ.ನಂ: 60/2ಬಿ ಪೈಕಿ ತರಿ 0.21 ಎಕ್ರೆ, ಸ.ನಂ: 59/2ಎ2ಬಿ ಪೈಕಿ ತರಿ 0.06 ಎಕ್ರೆ ಮತ್ತು ಸ.ನಂ 179/2ಎ ಪೈಕಿ 0.15 ಎಕ್ರೆ ಆಸ್ತಿಗಳನ್ನು ದಿನಾಂಕ: 09/03/2000 ದಂದು ಪುತ್ತೂರು ಸ.ರಿ. ಆಫೀಸಿನ 1-1023(307-334) 2136/1999-2000 ದಂತೆ ನೋಂದಾಯಿಸಲ್ಪಟ್ಟ ವಿಭಾಗ ಪತ್ರದ ಪ್ರಕಾರ : ಮೇಲ್ಕಾಣಿಸಿದ ಅಪೀಲುದಾರರ ಹಿಶೆಗೆ ವಿಂಗಡಿಸಿದ್ದು, ಖಾಸಾ ಸ್ವಾಧೀನತೆಯಿಂದ ಅನುಭವಿಸಿಕೊಂಡು ಬರ್ರುತ್ತಿದ್ದಾರೆ. ಸದ್ರಿ ಮೇಲ್ಮನವಿದಾರರ ಹಿಶೆಗೆ ವಿಂಗಡಿಸಿದ ಆಸ್ತಿಗಳ ಪೈಕಿ ಸ.ನಂ: 58/2 ಪೈಕಿ 0.02 ಎಕ್ರೆ(ಪ್ರಕೃತ ಸ.ನಂ.58/2(ಪಿ3) 0.02 ಮತ್ತು ಸ.ನಂ: 60/2ಬಿ ಪೈಕಿ ತರಿ 0.21 ಎಕ್ರೆ ಆಸ್ತಿಗಳ ಪಹಣಿಯಲ್ಲಿ ಮೇಲ್ಮನವಿದಾರರ ಹೆಸರನ್ನು ದಾಖಲಿಸಿರುತ್ತಾರೆ. ಆದರೆ, ಸ.ನಂ: 60/1ಬಿ ಪೈಕಿ ತರಿ 0.12 ಎಕ್ರೆ, ಸ.ನಂ: 59/2ಎ2ಬಿ ಪೈಕಿ ತರಿ 0.06 ಎಕ್ರೆ ಮತ್ತು ಸ.ನಂ: 179/2ಎ ಪೈಕಿ 0.15 ಎಕ್ರೆ ಆಸ್ತಿಗಳ ಪಹಣಿಯಲ್ಲಿ ವಿಭಾಗ ಪತ್ರದ ಪ್ರಕಾರ ಅಪೀಲುದಾರರ ಹೆಸರು ದಾಖಲಾಗದೇ ಇರುವುದು ಕಂಡು ಬರುತ್ತದೆ. ಅಲ್ಲದೇ ಈ ಬಗ್ಗೆ ಮ್ಯುಟೇಶನ್ ವಹಿ 148/99 ರ ಧೃಢೀಕೃತ ನಕಲನ್ನು ಮೇಲ್ಮನವಿದಾರರು ಪರಿಶೀಲಿಸಿದಾಗ ವಿಭಾಗ ಪತ್ರ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳ ಬಗ್ಗೆ ಮಾತ್ರ ಮ್ಯುಟೇಶನ್ ಧೃಢೀಕರಿಸಿರುವುದು ಕಂಡು ಬರುತ್ತದೆ. ಈ ಬಗ್ಗೆ ಅಪೀಲುದಾರರು ದಿನಾಂಕ: 28/08/2015 ರಂದು ತನ್ನ ಹಿಶೆಗೆ ವಿಂಗಡಿಸಿದ ಆಸ್ತಿಗಳನ್ನು ಪಹಣಿ ಪತ್ರದಲ್ಲಿ ಹೆಸರು ನಮೂದು ಮಾಡುವಂತೆ ಮಾನ್ಯ ತಹಶೀಲ್ದಾರರ ಕಛೇರಿಗೆ ಅರ್ಜಿ ಸಲ್ಲಿಸಿದ್ದು, ತಿದ್ದುಪಡಿ ಪ್ರಕರಣದ ವ್ಯಾಪ್ತಿಗೆ ಬಾರದ ಕಾರಣ

ಸೂಕ್ತ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವಂತೆ ತಿಳಿಸಿದ್ದು, ದಿನಾಂಕ: 05/09/2015 ರಂದು ಹಿಂಬರಹವನ್ನು ನೀಡಿರುತ್ತಾರೆ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಪುತ್ತೂರು ತಾಲೂಕು ತಹಶೀಲ್ದಾರರು ದಿ: 05/09/2015 ರಂದು ಆರ್ ಆರ್ ಟಿ ಸಿ ಆರ್: 83/15-16 ವ್ಯವಹರಣೆಯಲ್ಲಿ ನೀಡಿದ ಆದೇಶದ ವಿರುದ್ಧ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ದಿ: 30/12/2015 ರಿಂದ ದಿ: 15/06/2016 ರರವರೆಗೆ ವಿವಿಧ ದಿನಾಂಕಗಳಂದು ತನಿಖೆಗೆ ಮುಂದೂಡಿ ಅಂತಿಮವಾಗಿ ದಿನಾಂಕ 15/06/2016 ರಂದು ಆದೇಶಕ್ಕೆ ಮುಂದೂಡಲಾಯಿತು.

ವಿಚಾರಣೆ ಕಾಲದಲ್ಲಿ ಮೇಲ್ಮನವಿದಾರರು ಸಲ್ಲಿಸಿದ ಲಿಖಿತ ವಾದದಲ್ಲಿ ಮೇಲ್ಮನವಿಯಲ್ಲಿರುವ ಅಂಶಗಳನ್ನೇ ಪುನರುಚ್ಛರಿಸಿರುತ್ತಾರೆ. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡಂತೆ ಆದೇಶ ಮಾಡಿದೆ

**ಆದೇಶ.**

ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

ಎಂ.ಆರ್ ಎಸ್ ಆರ್ 148/99-00ನ್ನು ಪರಿಶೀಲನೆ ಮಾಡಿ ಪುತ್ತೂರು ಸ.ರಿ. ಆಫೀಸಿನ 2136/1999-2000 ದಂತೆ ನೋಂದಾಯಿಸಲ್ಪಟ್ಟ ವಿಭಾಗ ಪತ್ರದ ಪ್ರಕಾರ ಪಹಣಿ ದಾಖಲಿಸಲು ತಹಶೀಲ್ದಾರರು, ಪುತ್ತೂರು ತಾಲೂಕು, ಪುತ್ತೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: ೨೬ 10 -2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ, ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ: ಶ್ರೀ ಸಿ ಎಚ್ ಜಯರಾಮ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಕಡತ ಸಂಖ್ಯೆ ಆರ್ ಆರ್ ಟಿ ಸಿ ಆರ್: 83/2015-16 ಪುಟಸಂಖ್ಯೆ 1 ರಿಂದ 36 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.